**ದಿನಾಂಕಃ 03.07.2025 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.**

**ಪಾಟಿ ಸವಾಲುಃ ವಾದಿ ಪರ ಶ್ರೀ ಇ ಎನ್ ವಕೀಲರಿಂದ.**

ನಾನು ದ್ವಾರಹಳ್ಳಿ ಗ್ರಾಮದ ವಾಸಿ ಅಂದರೆ ಸರಿ. ಆರ್ ಸಿ ಪಾಟೀಲ್ ರವರು ಮೂಲತಃ ದ್ವಾರಹಳ್ಳಿ ಗ್ರಾಮದವರು ಅಂದರೆ ಸರಿ. ಆರ್ ಸಿ ಪಾಟೀಲ್ ರವರು ದೊಡ್ಡ ಜಮೀನುದಾರರು ಅಂದರೆ ಸರಿ. ಆರ್ ಸಿ ಪಾಟೀಲ್ ರವರಿಗೆ 1 ನೇ ಪ್ರತಿವಾದಿ ಹೆಂಡತಿ ಇರುತ್ತಾರೆ ಅಂದರೆ ಸರಿ. ಆರ್ ಸಿ ಪಾಟೀಲ್ ರವರಿಗೆ ಒಟ್ಟು ಎಷ್ಟು ಜನ ಮಕ್ಕಳು ಅಂದರೆ ಸಾಕ್ಷಿ 2 ಜನ ಗಂಡು ಮಕ್ಕಳು ಮತ್ತು 4 ಜನ ಹೆಣ್ಣು ಮಕ್ಕಳು ಇರುತ್ತಾರೆ ಎನ್ನುತ್ತಾರೆ. 2 ನೇ ಪ್ರತಿವಾದಿ ಆರ್ ಸಿ ಪಾಟೀಲ್ ರವರ ಹಿರಿಯ ಮಗ ಅಂದರೆ ಸರಿ. ಆರ್ ಸಿ ಪಾಟೀಲ್ ರವರ 2 ನೇ ಮಗನ ಹೆಸರು ಏನು ಅಂದರೆ ಸಾಕ್ಷಿ ಮಲ್ಲನಗೌಡರು ಇರುತ್ತದೆ ಎನ್ನುತ್ತಾರೆ. 3 ನೇ ಪ್ರತಿವಾದಿ ಮಲ್ಲನಗೌಡರ ಹೆಂಡತಿ ಹಾಗೂ ಪ್ರತಿವಾದಿ ನಂ.4,5 ರವರು ಅವರ ಮಕ್ಕಳಿರುತ್ತಾರೆ ಅಂದರೆ ಸರಿ. ವಾದಿಗಳು ಆರ್ ಸಿ ಪಾಟೀಲ್ ರವರ ಮಕ್ಕಳಿರುತ್ತಾರೆ ಅಂದರೆ ಸರಿ. ಆರ್ ಸಿ ಪಾಟೀಲ್ ರವರು ದ್ವಾರಹಳ್ಳಿ ಗ್ರಾಮದಲ್ಲಿ ಇರುವ ಮನೆಯಲ್ಲಿ ವಾಸ ಮಾಡುವುದನ್ನು ಬಿಟ್ಟು ಎಷ್ಟು ವರ್ಷಗಳಾಗಿರುತ್ತದೆ ಅಂದರೆ ಸಾಕ್ಷಿ 6–7 ವರ್ಷಗಳಾಗಿರುತ್ತವೆ ಎನ್ನುತ್ತಾರೆ. ಆರ್ ಸಿ ಪಾಟೀಲ್ ರವರು ಅಗಸನಹಳ್ಳಿ ಗ್ರಾಮದಲ್ಲಿ ಒಂದು ರೈಸ್ ಮಿಲ್ ಕಟ್ಟಿಸಿ ಅಲ್ಲಿ ವಾಸ ಮಾಡಲು ಪ್ರಾರಂಭಿಸಿರುತ್ತಾರೆ ಅಂದರೆ ಸರಿ. ಆರ್ ಸಿ ಪಾಟೀಲ್ ರವರ ಜೊತೆ 6 ನೇ ಪ್ರತಿವಾದಿ ವಾಸ ಇದ್ದರು ಅಂದರೆ ಸರಿ. ನಿಮಗೆ ಯಾವ ಪತ್ರಕ್ಕೆ ಸಹಿ ಮಾಡಬೇಕು ಎಂದು ಯಾರು, ಯಾವ ದಿನ ಕರೆದಿರುತ್ತಾರೆ ಅಂದರೆ ಸಾಕ್ಷಿ ದಿನಾಂಕಃ 09.01.2012 ರಂದು ಮೃತ್ಯುಪತ್ರಕ್ಕೆ ಸಹಿ ಮಾಡಬೇಕೆಂದು ಆರ್ ಸಿ ಪಾಟೀಲ್ ರವರು ನನ್ನನ್ನು ಸೊರಬದ ಉಪನೋಂದಣಿ ಕಚೇರಿಗೆ ಕರೆದಿರುತ್ತಾರೆ ಎನ್ನುತ್ತಾರೆ. ಸೊರಬದ ಉಪನೋಂದಣಿ ಕಚೇರಿಗೆ ಬರಬೇಕೆಂದು ಆರ್ ಸಿ ಪಾಟೀಲ್ ರವರು ನಿಮಗೆ ಯಾವತ್ತು ಹೇಳಿರುತ್ತಾರೆ ಅಂದರೆ ಸಾಕ್ಷಿ ಮೃತ್ಯುಪತ್ರ ನೊಂದಣಿ ಆಗುವ ಹಿಂದಿನ ದಿನ ಸಂಜೆ ಹೇಳಿರುತ್ತಾರೆ ಎನ್ನುತ್ತಾರೆ. ಆ ದಿನ ಸೊರಬಕ್ಕೆ ಯಾರ್–ಯಾರು ಬಂದಿರುತ್ತೀರಿ ಅಂದರೆ ಸಾಕ್ಷಿ ನಾನು, ಆರ್ ಸಿ ಪಾಟೀಲ್

ಮತ್ತು ಬಸವರಾಜಪ್ಪ ಬಂದಿರುತ್ತೇವೆ ಎನ್ನುತ್ತಾರೆ. ಸೊರಬಕ್ಕೆ ಯಾವುದರಲ್ಲಿ ಬಂದಿರುತ್ತೀರಿ ಅಂದರೆ ಸಾಕ್ಷಿ ಬಸ್ಸಿಗೆ ಬಂದಿರುತ್ತೇವೆ ಎನ್ನುತ್ತಾರೆ. ಬಸ್ ನ್ನು ಎಲ್ಲಿ ಹತ್ತಿರುತ್ತೀರಿ ಅಂದರೆ ಸಾಕ್ಷಿ ನಾನು ಮತ್ತು ಆರ್ ಸಿ ಪಾಟೀಲ್ ರವರು ಅಗಸನಹಳ್ಳಿಯಲ್ಲಿ ಹತ್ತಿರುತ್ತೇವೆ ಬಸವರಾಜಪ್ಪರವರು ಆನವಟ್ಟಿಯಲ್ಲಿ ಬಸ್ ಹತ್ತಿರುತ್ತಾರೆ ಎನ್ನುತ್ತಾರೆ. ಎಷ್ಟು ಗಂಟೆಯ ಬಸ್ ಗೆ ನೀವು ನಿಮ್ಮ ಊರಿನಿಂದ ಸೊರಬದ ಬಸ್ ಹತ್ತಿರುತ್ತೀರಿ ಅಂದರೆ ಸಾಕ್ಷಿ 10.00 ಗಂಟೆಯ ಬಸ್ ಗೆ ಎನ್ನುತ್ತಾರೆ. ಸೊರಬಕ್ಕೆ ಎಷ್ಟು ಗಂಟೆಗೆ ಬಂದಿರುತ್ತೀರಿ ಅಂದರೆ ಸಾಕ್ಷಿ 11.30 ಗಂಟೆಗೆ ಬಂದಿರುತ್ತೇವೆ ಎನ್ನುತ್ತಾರೆ. ಆ ದಿನ 3 ನೇ ಪ್ರತಿವಾದಿ ನಿಮ್ಮ ಜೊತೆ ಬಂದಿದ್ದರಾ ಅಂದರೆ ಸಾಕ್ಷಿ ಬಂದಿರುವುದಿಲ್ಲ ಎನ್ನುತ್ತಾರೆ. ಆರ್ ಸಿ ಪಾಟೀಲ್ ರವರಿಗೆ ಒಬ್ಬರೇ ಓಡಾಡಲು ಆಗುತ್ತಿರಲಿಲ್ಲ ಹಾಗಾಗಿ ಆ ದಿನ ಅವರ ಜೊತೆ 3 ಮತ್ತು 6 ನೇ ಪ್ರತಿವಾದಿ ಬಂದಿದ್ದರು ಅಂದರೆ ಸರಿಯಲ್ಲ. ಆ ದಿನ 3 ನೇ ಪ್ರತಿವಾದಿಯ ತಂದೆ ಸೊರಬಕ್ಕೆ ಬಂದಿದ್ದರು ಅಂದರೆ ಸರಿಯಲ್ಲ. ನಿಡಿ–6(ಇ) ನಿನ್ನ ಸಹಿ ಇರುತ್ತದೆ ಅಂದರೆ ಸಾಕ್ಷಿ ನೋಡಿ ಒಪ್ಪಿರುತ್ತಾರೆ. ನಿಡಿ–6 ರ ಹಿಂದಿನ ಪುಟದಲ್ಲಿ ಇರುವ ಸಹಿಯನ್ನು ಸಾಕ್ಷಿಗೆ ತೋರಿಸಿ ಇದು ಯಾರ ಸಹಿ ಇರುತ್ತದೆ ಅಂದರೆ ಸಾಕ್ಷಿ ತನ್ನ ಸಹಿ ಇರುತ್ತದೆಂದು ನೋಡಿ ಒಪ್ಪಿರುತ್ತಾರೆ ಅದನ್ನು ನಿಡಿ–6(ಜಿ) ಎಂದು ಗುರುತಿಸಲಾಯಿತು. ಆ ದಿನ ಎಷ್ಟು ಪತ್ರಗಳಿಗೆ ಸಾಕ್ಷಿಯಾಗಿ ಸಹಿ ಹಾಕಿರುತ್ತೀಯಾ ಅಂದರೆ ಸಾಕ್ಷಿ ಒಂದು ದಾನಪತ್ರಕ್ಕೆ ಮತ್ತು ಇನ್ನೊಂದು ಮೃತ್ಯುಪತ್ರಕ್ಕೆ ಸಹಿ ಹಾಕಿರುತ್ತೇನೆ ಎನ್ನುತ್ತಾರೆ. ಈ ದಿನ ನನ್ನನ್ನು 3 ನೇ ಪ್ರತಿವಾದಿ ಸಾಕ್ಷಿ ನುಡಿಯಲು ಅವರ ಕಾರಿನಲ್ಲಿ ಕರೆದುಕೊಂಡು ಬಂದಿರುತ್ತಾರೆ ಅಂದರೆ ಸರಿ. ಆರ್ ಸಿ ಪಾಟೀಲ್ ರವರು ದಾನಪತ್ರ ಮತ್ತು ಮೃತ್ಯುಪತ್ರ ಮಾಡಿರುತ್ತಾರೆ ಎಂದು ಹೇಳಿತ್ತೀರಿ ಅವುಗಳ ಪೈಕಿ ಯಾವುದನ್ನು ಮೊದಲು ಮಾಡಿರುತ್ತಾರೆ ಅಂದರೆ ಸಾಕ್ಷಿ ಮೃತ್ಯುಪತ್ರ ಮೊದಲು ಮಾಡಿರುತ್ತಾರೆ ಎನ್ನುತ್ತಾರೆ. ಮೃತ್ಯುಪತ್ರವನ್ನು ಯಾವಾಗ ನೋಂದಣಿ ಮಾಡಲಾಯಿತು ಅಂದರೆ ಸಾಕ್ಷಿ ಬೆಳಿಗ್ಗೆ 11.30 ರಿಂದ 1.00 ಗಂಟೆಯ ಒಳಗೆ ನೋಂದಣಿ ಮಾಡಿರುತ್ತಾರೆ ಎನ್ನುತ್ತಾರೆ. ದಾನಪತ್ರವನ್ನು ಯಾವಾಗ ನೋಂದಣಿ ಮಾಡಲಾಯಿತು ಅಂದರೆ ಸಾಕ್ಷಿ ಅದೇ ದಿನ ಮದ್ಯಾಹ್ನ 3.00 ಗಂಟೆಗೆ ನೋಂದಣಿ ಮಾಡಲಾಯಿತು ಎನ್ನುತ್ತಾರೆ. ದಾನಪತ್ರವನ್ನು

ಯಾರು ಯಾರಿಗೆ ಬರೆದುಕೊಟ್ಟಿರುತ್ತಾರೆ ಅಂದರೆ ಸಾಕ್ಷಿ ಆರ್ ಸಿ ಪಾಟೀಲ್ ರವರು 3 ನೇ ಪ್ರತಿವಾದಿಗೆ ಬರೆದುಕೊಟ್ಟಿರುತ್ತಾರೆ ಎನ್ನುತ್ತಾರೆ. ದಾನಪತ್ರ ಮೊದಲು ನೋಂದಣಿ ಆಗಿರುತ್ತದೆ ನಂತರ ಮೃತ್ಯುಪತ್ರ ನೊಂದಣಿ ಆಗಿದ್ದರು ಸಹ ಮೃತ್ಯುಪತ್ರ ಮೊದಲು ನೋಂದಣಿ ಆಗಿರುತ್ತದೆಂದು ಮಧ್ಯಾಹ್ನ ದಾನಪತ್ರ ನೋಂದಣಿ ಆಗಿರುತ್ತದೆಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ದಾನಪತ್ರ ನೋಂದಣಿ ಮಾಡಿದ ಐದೇ ನಿಮಿಷಕ್ಕೆ ಮೃತ್ಯುಪತ್ರ ನೋಂದಣಿ ಆಗಿರುತ್ತದೆ ಅಂದರೆ ಸರಿಯಲ್ಲ. 3 ನೇ ಪ್ರತಿವಾದಿ ಮತ್ತು ಅವರ ತಂದೆ ದಾನಪತ್ರ ಮಾಡಿಸಿಕೊಳ್ಳಲು ಮೊದಲೇ ಉಪನೋಂದಣಿ ಕಚೇರಿಯಲ್ಲಿ ಇದ್ದರು ದಾನಪತ್ರ ನೋಂದಣಿಯಾದ ನಂತರ ಮೃತ್ಯುಪತ್ರವನ್ನು ಸಹ ಅವರೆ ನಿಂತು ನೋಂದಣಿ ಮಾಡಿಸಿರುತ್ತಾರೆ ಅಂದರೆ ಸರಿಯಲ್ಲ. 3 ಮತ್ತು 6 ನೇ ಪ್ರತಿವಾದಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕೃತಗೊಳಿಸಲಾಯಿತು)

ನನ್ನ ಸಮಕ್ಷಮ
ಓ.ಹೇ.ಕೇ.ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಸೊರಬ.